janathavani@mac.com , www.janathavani.com 08192 254736 91642 99999

# ಜನತಾವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಗುರುವಾರ, ಫೆಬ್ರವರಿ 01, 2024, ದಾವಣಗೆರೆ, ಪುಟ : 8 ರೂ : 5, ಸಂಪುಟ : 50 ಸಂಚಿಕೆ : 260 RNI : 27369/75

## ಹೆಚ್ಚಲಿರುವ ಬೇಸಿಗೆ ಬೇಗೆ



ನೀರು-ಮೇವು ಕೊರತೆ ಆಗದಂತೆ ಕ್ರಮಕ್ಕೆ ಸೂಚನೆ

ಬೆಂಗಳೂರು, ಜ. 31 - ಭೀಕರ ಬರಗಾಲದ ನಡುವೆಯೇ ಬರುವ ಮಾರ್ಚ್-ಏಪ್ರಿಲ್‌ನಲ್ಲಿ ಬಿಸಿಲಿನ ಬೇಗೆ ಹೆಚ್ಚಲಿದೆ, ಜನ ಹಾಗೂ ಜಾನುವಾರಗಳ ರಕ್ಷಣೆಗೆ ಒತ್ತು ಕೊಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಿಲ್ಲಾ ಉಸ್ತುವಾರಿ ಹೊಣೆ ಹೊತ್ತ ಪ್ರಧಾನ ಕಾರ್ಯದರ್ಶಿಗಳಿಗೆ ಸಲಹೆ ಮಾಡಿದ್ದಾರೆ.

ವಿಧಾನಸೌಧದ ಮುಂಭಾಗದಲ್ಲಿ ಫೆಬ್ರವರಿ 8ರಂದು ಹಮ್ಮಿಕೊಂಡಿರುವ ಜನಸ್ಪಂದನ ಕಾರ್ಯಕ್ರಮದ ಪೂರ್ವಭಾವಿಯಾಗಿ ಇಂದು ಸಮ್ಮೇಳನ ಸಭಾಂಗಣದಲ್ಲಿ ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳನ್ನುದ್ದೇಶಿಸಿ ಮಾತನಾಡಿದ ಸಿದ್ದರಾಮಯ್ಯ, (2ನೇ ಪುಟಕ್ಕೆ)

Narayana Health Take Care

ಶಿವಮೊಗ್ಗದ ಖ್ಯಾತ ಸರ್ಜಿಕಲ್ ಗ್ಯಾಸ್ಟ್ರೋ ತಜ್ಞ ವೈದ್ಯರು ಈಗ ನಿಮ್ಮ ದಾವಣಗೆರೆಯಲ್ಲಿ

ಸಾಮಾನ್ಯ ಲಕ್ಷಣಗಳು
ಗ್ಯಾಸ್ಟ್ರಿಕ್ ಸಮಸ್ಯೆ | ಹೊಟ್ಟೆ ನೋವು | ಅಪೆಂಡಿಕ್ಸ್ | ಪಿತ್ತಕೋಶದಲ್ಲಿ ಕಲ್ಲು | ಹರ್ನಿಯ
ಮೂಲವ್ಯಾಧಿ | ಫಿಸ್ತೂಲ | ಮಲಬದ್ಧತೆ ಲ್ಯಾಪ್ರೊಸ್ಕೋಪಿಕ್ ಶಸ್ತ್ರ ಚಿಕಿತ್ಸೆ

ಡಾ|| ಸತೀಶ್ ಕುಮಾರ್ ಬಿ.ಎಂ.
ಸರ್ಜಿಕಲ್ ಗ್ಯಾಸ್ಟ್ರೋಎಂಟರಾಲಜಿ & ಲಿವರ್ ಟ್ರಾನ್ಸ್‌ಪ್ಲಾಂಟ್



ಫೆಬ್ರವರಿ 02 ರಂದು (ಪ್ರತಿ ತಿಂಗಳ 1ನೇ ಶುಕ್ರವಾರ) | ಮಧ್ಯಾಹ್ನ 2:30 ರಿಂದ ಸಂಜೆ 5:00 ರವರೆಗೆ
ಯುನಿಟಿ ಹೆಲ್ತ್ ಸೆಂಟರ್, ಸೈಂಟ್ ಪಾಲ್ಸ್ ಕಾನ್ವೆಂಟ್ ರಸ್ತೆ, 5ನೇ ತಿರುವು, ದಾವಣಗೆರೆ

ಹೆಚ್ಚಿನ ಮಾಹಿತಿಗಾಗಿ 88844 31388, 73494 48215
ಸಹ್ಯಾದ್ರಿ ನಾರಾಯಣ ಆಸ್ಪತ್ರೆ, ಹರಕೆರೆ, ಶಿವಮೊಗ್ಗ

## ರಾಜದಂಡದೊಂದಿಗೆ ಮುರ್ಮು ಆಗಮನ

ನವದೆಹಲಿ, ಜ. 31 - ಕೇಂದ್ರ ಸರ್ಕಾರ ಸಾಂಸ್ಕೃತಿಕ ಸಂಕೇತ ಎಂದು ಪರಿಗಣಿಸಿರುವ ರಾಜದಂಡದೊಂದಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನೂತನ ಸಂಸತ್ ಭವನ ಪ್ರವೇಶಿಸುವ ಮೂಲಕ ಹೊಸ ಪದ್ಧತಿ ಜಾರಿಗೆ ಬಂದಿದೆ.

ಅಧಿಕಾರಿಯೊಬ್ಬರು ರಾಜದಂಡ ಹಿಡಿದು ಮುಂದೆ ಸಾಗಿದ್ದರು. ರಾಷ್ಟ್ರಪತಿ ಮುರ್ಮು ಅವರೊಂದಿಗೆ ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಹಾಗೂ (2ನೇ ಪುಟಕ್ಕೆ)



ಹೃತ್ಪೂರ್ವಕ ಅಭಿನಂದನೆಗಳು

ತಮಿಳುನಾಡು ರಾಜ್ಯದ ಕೊಯಮತ್ತೂರು ಸ್ವಸ್ಥಿಕಾ ಸ್ಕೇಟಿಂಗ್ ರಿಂಕ್‌ನಲ್ಲಿ ನಡೆದ ಎಸ್‌ಎಸ್‌ಎಫ್‌ಐ ಸ್ಪೀಡ್ ಸ್ಕೇಟಿಂಗ್ ಫೆಡರೇಷನ್ ಆಫ್ ಇಂಡಿಯಾ ಆಯೋಜಿಸಿದ್ದ ರಾಷ್ಟ್ರಮಟ್ಟದ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕದಿಂದ ಭಾಗವಹಿಸಿದ್ದ ದಾವಣಗೆರೆಯ

1. ಶ್ರೇಯಸ್ ಪ್ರಭು ಆಚಾರ್ ಡಿ.ಎಂ. ಕಂಚಿನ ಪದಕ, 2. ಷಣ್ಮುಖ ಪ್ರಭು ಆಚಾರ್ ಡಿ.ಎಂ. ಬೆಳ್ಳಿ ಪದಕ

ಇವರಿಗೆ ಕೋಚ್ ಆದ ಮಿ. ಪೃಥ್ವಿಕಾಂತ್ ಹೆಡ್ ಕೋಚ್ ಆಫ್ ಸ್ಪೀಡ್ ಸ್ಕೇಟಿಂಗ್ ಅಸೋಸಿಯೇಷನ್ ದಾವಣಗೆರೆ ಕೆ.ಎಸ್.ಎಸ್.ಎ. ಸ್ಟೇಟ್ ಸೆಕ್ರೆಟರಿ ಆದ ಮಣಿಕಂಠ ಅವರು ಪ್ರೋತ್ಸಾಹಿಸಿದ್ದಾರೆ.

ತಂದೆ ಮೋಹನಾಚಾರ್ ಎ.ಆರ್., ಪ್ರಭಾ ಮೋಹನ್ ಎ.ಆರ್., ಸುನೀತಾ ಮೋಹನ್ ಎ.ಆರ್., ಗುರುಕುಲ ಶಾಲಾ ಸೆಕ್ರೆಟರಿ ಅಬ್ದುಲ್ ಆರ್., ವಿರೋಧ ಪಕ್ಷದ ನಾಯಕ ಗಡಿಗುಡಾಳ್ ಮಂಜುನಾಥ್, ನಲ್ಲೂರು ಪ್ರೇಮಾ ಅರುಣಾಚಲ ಎನ್. ರೇವಣಕರ್ ಇವರುಗಳು ಅಭಿನಂದಿಸಿದ್ದಾರೆ.



ತಮ್ಮ ಜನ್ಮದಿನದ ಸಂಭ್ರಮದಲ್ಲಿರುವ
ನಮ್ಮ ನೆಚ್ಚಿನ ಸ್ನೇಹಜೀವಿಯಾದ ಯುವ ಕಣ್ಮಣಿ

ಶ್ರೀ ಶ್ರೀನಿವಾಸ ದಾಸಕರಿಯಪ್ಪ

ಅವರಿಗೆ
ಜನ್ಮದಿನದ ಶುಭಾಶಯಗಳು



ಶ್ರೀ ನಗರ ದೇವತೆ ದುರ್ಗಾಂಬಿಕಾ ದೇವಿ ಆಯುಷ್ಯ, ಆರೋಗ್ಯ, ಸುಖ, ಶಾಂತಿ ಕೊಟ್ಟು ಕರುಣಿಸಿ ಕಾಪಾಡಲಿ ಎಂದು ಪ್ರಾರ್ಥಿಸುತ್ತೇವೆ.

ಗುರುಪ್ರಸಾದ್ (ಬಂಟಿ)
ಸ್ನೇಹಬಳಗ

ಜನ್ಮದಿನದ ಶುಭಾಶಯಗಳು

76th



ಜಗತ್ತೆಂಬ ಸಂಸಾರ ಸಾಗರದ ನಾವಿಕ ಭಗವಂತನಾದರೆ,
ನಮ್ಮ ಸಂಸಾರದ ನಾವಿಕ, ಭಗವಂತನ ರೂಪದಲ್ಲಿರುವ
ತಾವು ಸಾರ್ಥಕ 75 ವಸಂತಗಳನ್ನು ಪೂರೈಸಿ, 76ನೇ ವಸಂತಕ್ಕೆ
ಪಾದಾರ್ಪಣೆ ಮಾಡುತ್ತಿರುವ ನಮ್ಮೆಲ್ಲರ ಮಾರ್ಗದರ್ಶಕರಾದ

ಶ್ರೀ ಕೃಷ್ಣಾ ಸಾ ಭೂತೆ

ಅವರಿಗೆ ಜನ್ಮ ದಿನದ ಶುಭಾಶಯಗಳು....
ಭಗವಂತನು ನಿಮಗೆ ಆಯುರಾರೋಗ್ಯ-
ಐಶ್ವರ್ಯ- ಸುಖ-ಶಾಂತಿ-ನೆಮ್ಮದಿ ನೀಡಲಿ ಹಾಗೂ
ಸಮಾಜಕ್ಕೆ ಇನ್ನೂ ಉತ್ತಮ ಸೇವೆ
ಸಲ್ಲಿಸುವ ಶಕ್ತಿ ನೀಡಲೆಂದು ಪ್ರಾರ್ಥಿಸುತ್ತೇವೆ.

✦ ಶ್ರೀಮತಿ ಸೇವಂತಿ ಕೆ. ಭೂತೆ ✦ ರಾಜೇಂದ್ರ ಕೆ. ಭೂತೆ ✦ ಶ್ರೀಮತಿ ಶಮಾ ಐ.ಎಸ್. ✦ ಸಾರಾ ಆರ್. ಭೂತೆ
✦ ಶ್ರಾವ್ಯ ಆರ್. ಭೂತೆ ✦ ರಾಘವ್ ಆರ್. ಭೂತೆ ✦ ರೇಷ್ಮ ಕಾಟ್ವೆ ✦ ಉಮಾಕಾಂತ್ ಕಾಟ್ವೆ
✦ ಜಿಯಾ ಮತ್ತು ಮನಾಲ್ ✦ ಶ್ರೀಮತಿ ಶಶಿಕಲಾ ಶ್ರೀ ಶೈಲ ಆರಾಧ್ಯ
✦ ಭೂತೆ ಹಾಗೂ ಆರಾಧ್ಯ ಕುಟುಂಬದವರು

# ಎಂಪಿ ಚುನಾವಣೆಯಲ್ಲಿ ಪಂಚಮಸಾಲಿ ಸಮುದಾಯಕ್ಕೆ ಪ್ರಾತಿನಿಧ್ಯ ನೀಡಿ : ವಚನಾನಂದ ಶ್ರೀ

ಹರಿಹರ, ಜ. 31 - ಮುಂಬರುವ ಎಂ.ಪಿ. ಚುನಾವಣೆಯಲ್ಲಿ ಪಂಚಮಸಾಲಿ ಸಮುದಾಯಕ್ಕೆ ಟಿಕೆಟ್ ಹಂಚಿಕೆಯಲ್ಲಿ ಹೆಚ್ಚಿನ ಪ್ರಾತಿನಿಧ್ಯವನ್ನು ಎರಡೂ ರಾಷ್ಟ್ರೀಯ ಪಕ್ಷಗಳು ನೀಡಬೇಕು ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಮಹಾಸ್ವಾಮೀಜಿ ಹೇಳಿದರು.



ನಗರದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಜ್ಯದಾದ್ಯಂತ ಪಂಚಮಸಾಲಿ ಸಮಾಜದವರು ದಾವಣಗೆರೆ, ಹಾವೇರಿ, ಧಾರವಾಡ, ಬೆಳಗಾವಿ, ಗದಗ, ಬಾಗಲಕೋಟೆ, ಕೊಪ್ಪಳ, ಚಿಕ್ಕೋಡಿ, ಬೀದರ್, ಸೇರಿದಂತೆ ಹಲವಾರು ಜಿಲ್ಲೆಗಳಲ್ಲಿ ಪಂಚಮಸಾಲಿ ಸಮುದಾಯದ ಜನಸಂಖ್ಯೆ ಅಧಿಕವಾಗಿ ಇದ್ದರೂ ಸಹ ಪಂಚಮಸಾಲಿ ಸಮಾಜಕ್ಕೆ ರಾಜಕೀಯ ಪ್ರಾತಿನಿಧ್ಯ ಸಿಕ್ಕಿಲ್ಲ. ಹಾಗಾಗಿ ಎಂ.ಪಿ. ಚುನಾವಣೆಯಲ್ಲಿ ಸಾಮಾಜಿಕ ನ್ಯಾಯವನ್ನು ಕೊಡುವಂತಹ ಕೆಲಸವನ್ನು ಎರಡೂ ರಾಷ್ಟ್ರೀಯ ಪಕ್ಷಗಳು ಮಾಡಬೇಕು. ಸಹೋದರ ಸಮುದಾಯದ ಜನಸಂಖ್ಯೆ ಕಡಿಮೆ ಪ್ರಮಾಣದಲ್ಲಿ ಇದ್ದರೂ ಸಹ ಹೆಚ್ಚಿನ ಪಾಲನ್ನು ಅವರು ಪಡೆದುಕೊಂಡಿದ್ದಾರೆ. ಪಂಚಮಸಾಲಿ ಸಮಾಜದ ಜನರು ಮತಗಳನ್ನು ಹಾಕಲಿಕ್ಕೆ ಮಾತ್ರ ಸೀಮಿತವಾಗಿದೆ. ಹಾಗಾಗಿ ಸಾಮಾಜಿಕ ನ್ಯಾಯದ ಪ್ರಕಾರ ಪಕ್ಷಕ್ಕೆ ನಿಷ್ಠೆ ಇದ್ದವರಿಗೆ ಮತ್ತು ಯೋಗ್ಯರಿಗೆ ಎರಡು ರಾಷ್ಟ್ರೀಯ ಪಕ್ಷಗಳು ಟಿಕೆಟ್ ನೀಡಬೇಕು ಎಂದು ಹೇಳಿದರು.

ಪಂಚಮಸಾಲಿ ಗುರುಪೀಠದ ಆಡಳಿತ ಅಧಿಕಾರಿ ಡಾ. ರಾಜಕುಮಾರ್ ಮಾತನಾಡಿ ರಾಜ್ಯದಲ್ಲಿ ಪಂಚಮಸಾಲಿ ಸಮಾಜದ ಜನರು ಅಧಿಕಾವಾಗಿ ಇದ್ದರೂ ಸಹ ರಾಜಕೀಯವಾಗಿ ಹೆಚ್ಚಿನ ಪ್ರಾತಿನಿಧ್ಯ ಸಿಕ್ಕಿಲ್ಲ. ಕಳೆದ ಒಂಬತ್ತು ವರ್ಷಗಳ ಕಾಲ ಕೇಂದ್ರದ ಬಿಜೆಪಿ ಸರ್ಕಾರ ಒಬ್ಬ ಪಂಚಮಸಾಲಿ ಸಮಾಜದವರಿಗೆ ಮಂತ್ರಿ ಸ್ಥಾನವನ್ನು ಕೊಡಲಿಲ್ಲ. ರಾಜ್ಯದಲ್ಲಿ ಬಿಜೆಪಿ ಸರ್ಕಾರದಲ್ಲಿ ನಾಲ್ಕು ಜನರು ಸಿ.ಎಂ. ಆದರೂ ಸಹಿತ ಒಬ್ಬರನ್ನು ಪಂಚಮಸಾಲಿ ಸಿ.ಎಂ. ಮಾಡಲಿಲ್ಲ ಮತ್ತು ರಾಜ್ಯದಲ್ಲಿ ಕಳೆದ 14 ವರ್ಷಗಳಿಂದ ಒಬ್ಬರು ಸಿ.ಎಂ. ಆಗಿರುವುದಿಲ್ಲ. ಉಪ-ಮುಖ್ಯಮಂತ್ರಿ ಸ್ಥಾನವನ್ನು ಕೊಡಲಿಲ್ಲ. ಈ ರೀತಿಯಲ್ಲಿ ಪಂಚಮಸಾಲಿ ಸಮಾಜದವರನ್ನು ಕಡೆಗಣಿಸಲಾಗುತ್ತಿದೆ. ಬರುವ ಎಂ.ಪಿ. ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯವನ್ನು ಹೊಂದಿರುವ, ಜನಪ್ರಿಯತೆ ಹೊಂದಿರುವ ವ್ಯಕ್ತಿಯ ಆದ್ಯತೆಯನ್ನು ಪರಿಗಣಿಸಿ ಪಂಚಮಸಾಲಿ ವ್ಯಕ್ತಿಗಳಿಗೆ ರಾಜ್ಯದಾದ್ಯಂತ 5 ಕಡೆಗಳಲ್ಲಿ ಎಂ.ಪಿ. ಚುನಾವಣೆಯಲ್ಲಿ ಟಿಕೆಟ್ ನೀಡಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಜಿ.ಪಿ ಪಾಟೀಲ್, ಧರ್ಮದರ್ಶಿಗಳಾದ ಬಾವಿ ಬೆಟ್ಟಪ್ಪ, ಬಿ.ಸಿ. ಉಮಾಪತಿ, ಜ್ಯೋತಿ ಪ್ರಕಾಶ್, ಚಂದ್ರಶೇಖರ್ ಪೂಜಾರ್, ಮುಖಂಡರಾದ ಪ್ರಕಾಶ್ ಪಾಟೀಲ್ ದಾವಣಗೆರೆ, ವಸಂತ ಉಲ್ಲತ್ತಿ, ರಾಣೆಬೇನ್ನೂರು, ಲಿಂಗರಾಜ್ ಬೆಳಕೇರಿ ಇತರರು ಹಾಜರಿದ್ದರು.

## ಜಿಗಳಿ : ಇಂದು - ನಾಳೆ ಮುತ್ತೈದೆ ಹುಣ್ಣಿಮೆ

ಜಿಗಳಿ ಗ್ರಾಮದ ಶ್ರೀ ಚಂದ್ರಗುತ್ಯಮ್ಮದೇವಿ ದೇವಸ್ಥಾನದಲ್ಲಿ ಇಂದು ಸಂಜೆ ಮತ್ತು ನಾಳೆ ಶುಕ್ರವಾರ ಬೆಳಿಗ್ಗೆ ಮುತ್ತೈದೆ ಹುಣ್ಣಿಮೆ ಕಾರ್ಯಕ್ರಮ ಹಾಗೂ ಅನ್ನ ಸಂತರ್ಪಣೆಯನ್ನು ಹಮ್ಮಿಕೊಳ್ಳಲಾಗಿದೆ. ಶುಕ್ರವಾರ ಸಂಜೆ 7 ಗಂಟೆಗೆ ಗ್ರಾಮದಲ್ಲಿ ಶ್ರೀ ಚಂದ್ರಗುತ್ಯಮ್ಮದೇವಿಯ ಮೆರವಣಿಗೆ ಇರುತ್ತದೆ.






## ರಾಜದಂಡದೊಂದಿಗೆ ರಾಷ್ಟ್ರಪತಿ ಮುರ್ಮು ಆಗಮನ

(1ನೇ ಪುಟದಿಂದ) ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರೂ ಇದ್ದರು.

ಹಿರಿಯ ಮಾರ್ಷಲ್ ರಾಜೀವ್ ಶರ್ಮಾ ಅವರು ಸಾಂಪ್ರದಾಯಿಕ ಉಡುಗೆಯೊಂದಿಗೆ ರಾಜದಂಡ ಹಿಡಿದು ಮೆರವಣಿಗೆಯ ಮುಂಚೂಣಿ ಯಲ್ಲಿದ್ದರು. ಸಂಸದೀಯ ವ್ಯವಹಾರ ಗಳ ಸಚಿವ ಪ್ರಹ್ಲಾದ್ ಜೋಷಿ ಹಾಗೂ ಲೋಕಸಭೆ ಪ್ರಧಾನ ಕಾರ್ಯದರ್ಶಿ ಉತ್ಪಲ್ ಕುಮಾರ್ ಸಿಂಗ್ ಹಾಗೂ ರಾಜ್ಯಸಭಾ ಪ್ರಧಾನ ಕಾರ್ಯದರ್ಶಿ ಪಿ.ಸಿ. ಮೂಡಿ ಅವರಿದ್ದರು.

ರಾಷ್ಟ್ರಪತಿ ಮುರ್ಮು ಅವರು ಆರು ಕುದುರೆಗಳ ಬಗ್ಗಿಯೊಂದಿಗೆ ಅಂಗರಕ್ಷಕರೊಂದಿಗೆ ಸದನಕ್ಕೆ ಆಗಮಿಸಿದ್ದರು.

ಉಪ ರಾಷ್ಟ್ರಪತಿ ಧನಕರ್, ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಲೋಕಸಭಾಧ್ಯಕ್ಷ ಬಿರ್ಲಾ ಅವರು ಗಜ ದ್ವಾರದಲ್ಲಿ ರಾಷ್ಟ್ರಪತಿಗೆ ಸ್ವಾಗತ ನೀಡಿದರು.

ರಾಷ್ಟ್ರಪತಿ ಅವರು ಉಭಯ ಸದನಗಳ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಲು ಆಗಮಿಸಿದಾಗ, ಭಾರತ್ ಮಾತಾ ಕಿ ಜೈ, ಜೈ ಶ್ರೀ ರಾಮ್, ಜೈ ಸಿಯಾ ರಾಮ್ ಹಾಗೂ ಜೈ ಜಗನ್ನಾಥ್ ಘೋಷಣೆಗಳು ಮೊಗಿದವು.

ಜಂಟಿ ಅಧಿವೇಶನ ಉದ್ದೇಶಿಸಿ ರಾಷ್ಟ್ರಪತಿ ಮಾತನಾಡುವಾಗ ಅಯೋಧ್ಯೆಯಲ್ಲಿ ಶತಮಾನಗಳ ನಿರೀಕ್ಷೆಯ ನಂತರ ಭವ್ಯ ರಾಮ ಮಂದಿರದಲ್ಲಿ ರಾಮ ಲಲ್ಲಾ ಸ್ಥಾಪಿತರಾಗಿದ್ದಾರೆ ಎಂದು ಹೇಳಿದರು. ಆಗ ಜೈ ಶ್ರೀರಾಮ್ ಹಾಗೂ ಜೈ ಸಿಯಾ ರಾಮ್ ಘೋಷಣೆಗಳು ಮೊಳಗಿದವು.

# ಜ್ಞಾನವಾಪಿ ನೆಲಮಾಳಿಗೆಯಲ್ಲಿ ದೇವರಿಗೆ ಪೂಜೆ

**ಅರ್ಚಕರಿಗೆ ನ್ಯಾಯಾಲಯದ ಅನುಮತಿ**

ವಾರಣಾಸಿ, ಜ. 31 – ಜ್ಞಾನವಾಪಿ ಸಂಕೀರ್ಣದ ನೆಲಮಾಳಿಗೆಯಲ್ಲಿರುವ ಹಿಂದೂ ದೇವರುಗಳಿಗೆ ಪೂಜೆ ಮಾಡಲು ವಾರಣಾಸಿ ಜಿಲ್ಲಾ ನ್ಯಾಯಾಲಯ ಅರ್ಚಕರಿಗೆ ಅನುಮತಿ ನೀಡಿದೆ ಎಂದು ಹಿಂದೂ ಪರ ವಕೀಲ ಮದನ್ ಮೋಹನ್ ಯಾದವ್ ತಿಳಿಸಿದ್ದಾರೆ.

ನ್ಯಾಯಮೂರ್ತಿ ಎ.ಕೆ. ವಿಶ್ವೇಶ ಅವರು ಈ ಬಗ್ಗೆ ಆದೇಶ ಹೊರಡಿಸಿದ್ದಾರೆ. ಏಳು ದಿನಗಳ ಒಳಗಾಗಿ ಅರ್ಚಕ ಶೈಲೇಂದ್ರ ಕುಮಾರ್ ಪಾಠಕ್ ಅವರು ಪೂಜೆ ಮಾಡಲು ಸೌಲಭ್ಯ ಕಲ್ಪಿಸಬೇಕು ಎಂದು ಜಿಲ್ಲಾಡಳಿತಕ್ಕೆ ತಿಳಿಸಿದ್ದಾರೆ.

ಜ್ಞಾನವಾಪಿ ಸಂಕೀರ್ಣದ ಪಕ್ಕದಲ್ಲಿರುವ ಕಾಶಿ ವಿಶ್ವನಾಥ ದೇವಾಲಯ ನಿರ್ವಹಿಸುವ ಕಾಶಿ ವಿಶ್ವನಾಥ ಟ್ರಸ್ಟ್ ಈ ಪೂಜೆ ಸಲ್ಲಿಕೆಗೆ ವ್ಯವಸ್ಥೆ ಮಾಡಬೇಕು ಎಂದು ನ್ಯಾಯಾಲಯ ತಿಳಿಸಿದೆ. ದೇವಾಲಯ ಧ್ವಂಸ ಮಾಡಿ ಅದರ ಮೇಲೆ ಮಸೀದಿ ಕಟ್ಟಲಾಗಿದೆ ಎಂದು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗಿತ್ತು. ಇತ್ತೀಚೆಗೆ ಭಾರತೀಯ ಪುರಾತತ್ವ ಇಲಾಖೆ ನಡೆಸಿದ ಸಮೀಕ್ಷೆ ಸಹ, ಈ ವಾದಕ್ಕೆ ಪುಷ್ಠಿ ನೀಡಿತ್ತು.

ಪಾಠಕ್ ಅವರು ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಿ, ಪೂಜೆ ನಡೆಸಲು ಅನುಮತಿ ನೀಡಬೇಕು ಎಂದು ಕೋರಿದ್ದರು.

ನನ್ನ ತಾತ ಸೋಮನಾಥ ವ್ಯಾಸ್ ಅವರು 1993ರವರೆಗೂ ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸುತ್ತಿದ್ದರು. ಅಧಿಕಾರಿಗಳು ನಂತರ ಈ ನೆಲಮಾಳಿಗೆ ಮುಚ್ಚಿದ್ದರು. ಅಲ್ಲಿರುವ ದೇವರುಗಳ ಪೂಜೆಗೆ ಹಕ್ಕು ನೀಡಬೇಕು ಎಂದು ಪಾಠಕ್ ಕೋರಿದ್ದರು.

ನಂದಿ ಮೂರ್ತಿಯ ಎದುರು ತಡೆಗಳನ್ನು ಅಳವಡಿಸಲಾಗಿದೆ. ಇದನ್ನು ತೆರವುಗೊಳಿಸುವ ಮೂಲಕ ಪೂಜೆ ಸಲ್ಲಿಸಲು ದಾರಿ ಬಿಡಿಸಿ ಕೊಡಬೇಕು ಎಂದೂ ಅರ್ಜಿದಾರರು ಕೋರಿದ್ದರು.

1993ರಲ್ಲಿ ಆಗಿನ ಮುಖ್ಯಮಂತ್ರಿ ಮುಲಾಯಂ ಸಿಂಗ್ ಯಾದವ್ ಅವರು ಪೂಜೆ ತಡೆದಿದ್ದರು. 1992ರಲ್ಲಿ ಬಾಬ್ರಿ ಮಸೀದಿ ಧ್ವಂಸವಾಗಿದ್ದಕ್ಕೆ ಪ್ರತಿಯಾಗಿ ಇಲ್ಲಿ ಪೂಜೆ ತಡೆಯಲಾಗಿತ್ತು ಎಂದು ಹಿಂದೂ ಪರ ಕಕ್ಷಿದಾರರು ತಿಳಿಸಿದ್ದರು.

ಈ ನೆಲಮಾಳಿಗೆಯು ಮಸೀದಿ ಸಂಕೀರ್ಣದ ಭಾಗವಾಗಿದೆ. ಹೀಗಾಗಿ ಪೂಜೆಗೆ ಅನುಮತಿ ನೀಡಬಾರದು ಎಂದು ಮುಸ್ಲಿಂ ಪರ ಕಕ್ಷಿದಾರರು ವಾದ ಮಂಡಿಸಿದ್ದರು.

ನ್ಯಾಯಾಲಯದ ನಿರ್ಧಾರವನ್ನು ಸ್ವಾಗತಿಸಿರುವ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಅಲೋಕ್ ಕುಮಾರ್, ಪ್ರತಿಯೊಬ್ಬ ಹಿಂದೂವಿನ ಹೃದಯಕ್ಕೆ ಸಂತೋಷ ತರುವ ಪ್ರಮುಖ ನಿರ್ಧಾರ ಕಾಶಿ ನ್ಯಾಯಾಲಯದಿಂದ ದೊರೆತಿದೆ ಎಂದಿದ್ದಾರೆ.

## ಹೆಚ್ಚಲಿರುವ ಬೇಸಿಗೆ ಬೇಗೆ

(1ನೇ ಪುಟದಿಂದ) ಬೇಸಿಗೆಯಲ್ಲಿ ಕುಡಿಯುವ ನೀರು, ಮೇವು ಕೊರತೆ ಆಗದಂತೆ, ಜನರು ಗುಳೇ ಹೋಗದಂತೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯ. ಇದರಲ್ಲಿ ವ್ಯತ್ಯಾಸ ಕಂಡುಬಂದರೆ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಈಗಾಗಲೇ ರಾಜ್ಯದ ಬಹುಭಾಗ ಮಳೆ ಇಲ್ಲದೆ ಬರಗಾಲಕ್ಕೆ ಸಿಲುಕಿದೆ. ಮುಂದಿನ ಮೂರ್ನಾಲ್ಕು ತಿಂಗಳು ನಮಗೆ ಸವಾಲಾಗಿದೆ, ಇದನ್ನು ನೀವು ನಿಭಾಯಿಸಬೇಕು ಎಂದರು. ಅರಣ್ಯ ಪ್ರದೇಶದಲ್ಲಿ ಕಾಡು ಪ್ರಾಣಿಗಳಿಗೆ ನೀರು, ಮೇವು ದೊರೆಯದೇ ನಾಡಿಗೆ ನುಗ್ಗುವ ಸಾಧ್ಯತೆ ಇದೆ, ಅರಣ್ಯ ಪ್ರದೇಶಗಳಲ್ಲಿ ಮೂಲಸೌಕರ್ಯ ಕಲ್ಪಿಸಲು ಒತ್ತು ಕೊಡಿ.

ಈ ರೀತಿ ಕ್ರಮ ಕೈಗೊಳ್ಳುವುದರಿಂದ ಮಾನವ-ವನ್ಯಜೀವಿ ಸಂಘರ್ಷಕ್ಕೆ ಪರಿಹಾರ ದೊರೆಯುವ ಜೊತೆಗೆ ರೈತರ ಜಮೀನಿಗೆ ವನ್ಯ ಜೀವಿಗಳು ನುಗ್ಗುವುದನ್ನು ತಪ್ಪಿಸಬಹುದಾಗಿದೆ. ಮೇವು ಸಾಲದಾದರೆ, ಬೆಳೆಯಬೇಕು. ಇಲ್ಲವೇ ರೈತರಿಂದ ಖರೀದಿಸಿ, ಎಲ್ಲಿಯೂ ಮೇವಿಗೆ ಕೊರತೆಯಾಗದಂತೆ ನೋಡಿಕೊಳ್ಳಿ. ಖಾಸಗಿ ಮತ್ತು ಸರ್ಕಾರಿ ಜಾಗಗಳಲ್ಲಿ ಮೇವು ಬೆಳೆಯಲು ಒತ್ತು ಕೊಡಿ ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ಎಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ ಎಂಬ ಮಾಹಿತಿ ಈಗಾಗಲೇ ನಿಮಗೆ ಇರುತ್ತದೆ. ಅಂತಹ ಕಡೆಗಳಲ್ಲಿ ಮುಂಜಾಗ್ರತೆಯಾಗಿ ಕ್ರಮ ಕೈಗೊಳ್ಳಿ ಎಂದರು.

ಕಠಿಣ ಸಂದರ್ಭದಲ್ಲಿ ಜಿಲ್ಲಾಡಳಿತ ಚಾಕಚಕ್ಯತೆಯಿಂದ ಕೆಲಸ ಮಾಡಬೇಕು. ಕರ್ತವ್ಯ ಲೋಪ, ನಿರ್ಲಕ್ಷ್ಯ ಮಾಡುವ ಜಿಲ್ಲಾ ಮಟ್ಟದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಿ. ನೀವು ಕ್ರಮ ಕೈಗೊಳ್ಳದಿದ್ದರೆ, ಜಿಲ್ಲಾ ಮಟ್ಟದಲ್ಲಿ ಶಿಸ್ತು ಇರುವುದಿಲ್ಲ ಎಂದು ತಿಳಿಸಿದರು.

ಜನಸ್ಪಂದನದಲ್ಲಿ ಬಂದ ಸಮಸ್ಯೆಗಳಿಗೆ ಸಮರೋಪಾದಿಯಲ್ಲಿ ಪರಿಹಾರ ಒದಗಿಸಿಕೊಡಿ. ವಿಧಾನಸೌಧದ ಮುಂದೆ ನಡೆಯುವ ಸ್ಪಂದನ ಕಾರ್ಯಕ್ರಮಕ್ಕೆ ಪ್ರತಿ ಇಲಾಖೆಗೂ ಪ್ರತ್ಯೇಕ ಟೆಂಟ್ ತೆರೆಯಲಾಗುವುದು. ನಿಮ್ಮ ಇಲಾಖಾ ಟೆಂಟ್‌ನಲ್ಲೇ ಹಾಜರಿದ್ದು ಸಮಸ್ಯೆಗಳನ್ನು ಫೆಬ್ರವರಿ 8 ರಂದು ಬಗೆಹರಿಸಿ ಎಂದು ತಿಳಿಸಿದರು.

ಎ.ಸಿ., ಡಿ.ಸಿ., ತಹಶೀಲ್ದಾರ್‌ಗಳು ಮಾಡಬೇಕಾದ್ದನ್ನು ನಾವು ಮಾಡಬೇಕಿದೆ, ನೀವು ಅವರ ಮೇಲೆ ಬಿಗಿ ಹಿಡಿತ ಇಟ್ಟರೆ, ಜನರು ವಿಧಾನಸೌಧದವರೆಗೂ ಅರ್ಜಿ ಹಿಡಿದು ಬರುತ್ತಿರಲಿಲ್ಲ ಎಂದರು.

## ಸಿಇಟಿ : ಶಾಲಾ ಮಂಡಳಿಗಳ ವಿವರ ತಪ್ಪಾಗಿದ್ದರೂ ಅರ್ಜಿ ಸ್ವೀಕಾರ

ಬೆಂಗಳೂರು, ಜ. 31 - ಪ್ರಸ್ತುತ ವರ್ಷದ ಸಿಇಟಿ ಪರೀಕ್ಷೆಗೆ ಸಲ್ಲಿಸಿರುವ ಅಭ್ಯರ್ಥಿಗಳ ಅರ್ಜಿಗಳಲ್ಲಿ ತಾವು ಓದಿದ ಶಾಲಾ ಶಿಕ್ಷಣ ಮಂಡಳಿಗಳಿಗೆ ಸಂಬಂಧಿಸಿದಂತೆ ತಪ್ಪಾಗಿದ್ದರೂ ಅರ್ಜಿ ಸ್ವೀಕೃತವಾಗಲಿದೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, ಅರ್ಜಿಗಳಲ್ಲಿನ ಮಾಹಿತಿ ತಪ್ಪಾಗಿದ್ದರೂ ಯಾರೂ ಆತಂಕಕ್ಕೆ ಒಳಗಾಗಬೇಕಾಗಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ವಿದ್ಯಾರ್ಥಿಗಳ 12ನೇ ತರಗತಿ ಅಥವಾ ದ್ವಿತೀಯ ಪಿಯುಸಿ ನೋಂದಣಿ ಸಂಖ್ಯೆಯ ಆಧಾರದ ಮೇಲೆ ಪ್ರಾಧಿಕಾರವು ಅಂಕಗಳ ವಿವರಗಳನ್ನು ಪಡೆದುಕೊಳ್ಳಲಿದೆ. ವಿದ್ಯಾರ್ಥಿಗಳು ಒಂದೇ ಶಾಲಾ ಶಿಕ್ಷಣ ಮಂಡಳಿಯಲ್ಲಿ ಓದಿರಲಿ ಅಥವಾ ಹಲವು ಶಾಲಾ ಶಿಕ್ಷಣ ಮಂಡಳಿಗಳಲ್ಲಿ ಓದಿರಲಿ, ಅದರಿಂದೇನೂ ತೊಂದರೆ ಇಲ್ಲ ಎಂದಿದ್ದಾರೆ. ಜೊತೆಗೆ ಅಭ್ಯರ್ಥಿಗಳ 'ಸ್ಯಾಟ್ಸ್' ಡೇಟಾದಲ್ಲಿ 'ಸಿಐಎಸ್ಸಿಇ' ಎಂದಿರಬೇಕಾದ ಕಡೆ 'ಸಿಬಿಎಸ್‌ಇ' ಎಂದು ತೋರಿಸುತ್ತಿದ್ದರೆ ಅಥವಾ ಇದಕ್ಕೆ ತದ್ವಿರುದ್ಧವಾಗಿ ತೋರಿಸುತ್ತಿದ್ದರೂ ವಿದ್ಯಾರ್ಥಿಗಳು ಆತಂಕಕ್ಕೆ ಒಳಗಾಗಬೇಕಾಗಿಲ್ಲ.

ಅವರ ವ್ಯಾಸಂಗದ ವಿವರಗಳೇನೂ ಅದಲು-ಬದಲಾಗುವುದಿಲ್ಲ. ಅಲ್ಲದೆ, ಶಾಲೆಗಳಲ್ಲಿ ಸ್ಯಾಟ್ಸ್ ಡೇಟಾ ಅಲಭ್ಯತೆ, ವ್ಯಾಸಂಗ ಮಾಡಿದ ವರ್ಷಗಳ ಅಪೂರ್ಣ ಮಾಹಿತಿ ಮತ್ತು ಹಲವು ಶಿಕ್ಷಣ ಮಂಡಳಿಗಳಲ್ಲಿ ಓದಿದ್ದರೂ ಒಂದೇ ಒಂದು ಮಂಡಳಿಯ ನಮೂದು ಇತ್ಯಾದಿಗಳಿಂದ ಚಿಂತಿತರಾಗಬೇಕಾಗಿಲ್ಲ. ಮಿಗಿಲಾಗಿ, 2016-17ಕ್ಕಿಂತ ಮೊದಲು ಯಾವುದೇ ಶಿಕ್ಷಣ ಮಂಡಳಿಯಡಿ 10ನೇ ತರಗತಿ ತೇರ್ಗಡೆಯಾಗಿದ್ದು, ಸ್ಯಾಟ್ಸ್ ನಂಬರ್ ಹೊಂದಿಲ್ಲದೇ ಇರುವ ವಿದ್ಯಾರ್ಥಿಗಳು ಕೂಡ ನಿರಾತಂಕವಾಗಿ, ಸ್ಯಾಟ್ಸ್ ಸಂಖ್ಯೆಯೊಂದನ್ನು ಖಾಲಿ ಬಿಟ್ಟು ಅರ್ಜಿ ತುಂಬಬಹುದು ಎಂದು ಪ್ರಾಧಿಕಾರ ಸ್ಪಷ್ಟಪಡಿಸಿದೆ.









KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಪೇಟಿಎಂ ಪಾವತಿ ಬ್ಯಾಂಕ್‌ಗೆ ನಿರ್ಬಂಧ




ಮುಂಬೈ, ಜ. 31 – ಪೇಟಿಎಂ ಪಾವತಿ ಬ್ಯಾಂಕ್ (ಪಿ.ಪಿ.ಬಿ.ಎಲ್.) ವಿರುದ್ಧ ಪ್ರಮುಖ ಕ್ರಮ ತೆಗೆದುಕೊಂಡಿರುವ ರಿಸರ್ವ್ ಬ್ಯಾಂಕ್, ಫೆಬ್ರವರಿ 29ರ ನಂತರ ಬಹಳಷ್ಟು ಚಟುವಟಿಕೆಗಳನ್ನು ನಡೆಸದಂತೆ ನಿರ್ಬಂಧಿಸಿದೆ.

ಆದರೆ, ಬಡ್ಡಿ, ಕ್ಯಾಶ್‌ಬ್ಯಾಕ್ ಹಾಗೂ ರೀಫಂಡ್‌ಗಳನ್ನು ಗ್ರಾಹಕರಿಗೆ ಯಾವುದೇ ಸಮಯದಲ್ಲಿ ನೀಡಬಹುದು ಎಂದು ತಿಳಿಸಲಾಗಿದೆ.

ನಿಯಮಗಳನ್ನು ಪಾಲಿಸದ ಹಾಗೂ ಉಸ್ತುವಾರಿ ಕಳವಳಗಳ ಬಗ್ಗೆ ಗಮನ ಹರಿಸದ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ರಿಸರ್ವ್ ಬ್ಯಾಂಕ್ ಹೇಳಿದೆ. ಪಿ.ಪಿ.ಬಿ.ಎಲ್. ಹೊಸ ಗ್ರಾಹಕರನ್ನು ಸೇರ್ಪಡೆ ಮಾಡಿಕೊಳ್ಳಬಾರದು ಎಂದು ಮಾರ್ಚ್ 11, 2022ರಲ್ಲಿ ರಿಸರ್ವ್ ಬ್ಯಾಂಕ್ ನಿರ್ಬಂಧಿಸಿತ್ತು.

ಫೆಬ್ರವರಿ 29ರಿಂದ ಗ್ರಾಹಕರಿಂದ ಯಾವುದೇ ಹೊಸ ಠೇವಣಿ, ಸಾಲ ವಹಿವಾಟು ಇಲ್ಲವೇ ಟಾಪ್ ಅಪ್‌ಗಳನ್ನು ಪಡೆಯಬಾರದು. ಪ್ರೀಪೇಯ್ಡ್ ವ್ಯಾಲೆಟ್, ಫಾಸ್ಟ್ಯಾಗ್, ಎನ್.ಸಿ.ಎಂ.ಸಿ. ಕಾರ್ಡ್ ಇತ್ಯಾದಿ ಸೇವೆಗಳನ್ನೂ ತಡೆಯಲಾಗಿದೆ. ಆದರೆ, ಈಗಾಗಲೇ ಗ್ರಾಹಕರು ಖಾತೆಗಳಲ್ಲಿ ಹೊಂದಿರುವ ಹಣದ ಬಳಕೆಯ ಮೇಲೆ ಯಾವುದೇ ನಿರ್ಬಂಧ ಇಲ್ಲ.

# ಕಡ್ಲೇಬಾಳ್‌ನಲ್ಲಿ ಇಂದು ಪಲ್ಲಕ್ಕಿ ಸೇವೆ

ದಾವಣಗೆರೆ ಸಮೀಪದ ಕಡ್ಲೇ ಬಾಳ್‌ನಲ್ಲಿರುವ ಶ್ರೀ ಕ್ಷೇತ್ರ ನಾಗ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ ದಲ್ಲಿ ಇಂದು ಶ್ರೀ ನಾಗಸುಬ್ರಹ್ಮಣ್ಯ ಸ್ವಾಮಿಗೆ ಪಂಚಾಮೃತ ಅಭಿಷೇಕ, ರುದ್ರಾಭಿ ಷೇಕ, ಅಷ್ಟೋತ್ತರ ಪೂಜೆ, ಆಶ್ಲೇಷ ಬಲಿ ಪೂಜೆ, ಸುಬ್ರಹ್ಮಣ್ಯ ಮೂಲ ಮಂತ್ರ, ಹೋಮ ಹಾಗೂ ಸ್ವಾಮಿ ಯ ಪಲ್ಲಕ್ಕಿಸೇವೆ ಹಾಗೂ ಪ್ರಸಾದ ಸೇವೆ ಇರುತ್ತದೆ ಎಂದು ದೇವಸ್ಥಾನದ ಶ್ರೀಪಾದ್ ಭಟ್ ತಿಳಿಸಿದ್ದಾರೆ.


# ಮೊಬೈಲ್ ಬಿಡಿ ಭಾಗಗಳ ಆಮದು ತೆರಿಗೆ ಶೇ.10ಕ್ಕೆ ಇಳಿಕೆ



ನವದೆಹಲಿ, ಜ. 31 - ಬ್ಯಾಟರಿಯ ಕವರ್, ಲೆನ್ಸ್ ಹಾಗೂ ಸಿಮ್ ಸಾಕೆಟ್ ರೀತಿಯ ಮೊಬೈಲ್ ಬಿಡಿ ಭಾಗಗಳ ಆಮದಿನ ಮೇಲಿನ ತೆರಿಗೆಯನ್ನು ಕೇಂದ್ರ ಸರ್ಕಾರ ಶೇ.10ಕ್ಕೆ ಇಳಿಸಿದೆ. ಪ್ರಸಕ್ತ ಶೇ.15ರ ತೆರಿಗೆ ಇದೆ.

ಸ್ಥಳೀಯವಾಗಿ ಉತ್ಪಾದನೆ ಹಾಗೂ ರಫ್ತಿಗೆ ಉತ್ತೇಜನ ನೀಡಲು ಈ ಕ್ರಮ ತೆಗೆದುಕೊಳ್ಳಲಾಗಿದೆ. ಗುರುವಾರ ಕೇಂದ್ರ ಬಜೆಟ್ ಮಂಡನೆಯಾಗಲಿದ್ದು, ಅದರ ಮುನ್ನಾ ದಿನ ತೆರಿಗೆ ಇಳಿಕೆ ಮಾಡಲಾಗಿದೆ.


ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಟೆಲಿಕಾಂ ಸಚಿವ ಅಶ್ವಿನಿ ವೈಷ್ಣವ್, ತೆರಿಗೆ ಪರಿಷ್ಕರಣೆಯಿಂದ ಮೊಬೈಲ್ ಉತ್ಪಾದನಾ ವ್ಯವಸ್ಥೆಗೆ ಉತ್ತೇಜನ ಸಿಗಲಿದೆ. ಇದರಿಂದ ಉದ್ಯಮದಲ್ಲಿ ಸ್ಪಷ್ಟತೆ ಸಿಗಲಿದೆ ಎಂದಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಜಿ.ಟಿ.ಆರ್.ಐ. ಸಹ ಸ್ಥಾಪಕ ಅಜಯ್ ಶ್ರೀವಾಸ್ತವ, ರಫ್ತು ಉದ್ದೇಶಕ್ಕೆ ಆಮದು ಮಾಡಿಕೊಳ್ಳುವ ಬಿಡಿ ಭಾಗಗಳ ಮೇಲೆ ಈಗಾಗಲೇ ಶೂನ್ಯ ತೆರಿಗೆ ಇದೆ. ಹೀಗಾಗಿ ರಫ್ತಿನ ಉತ್ತೇಜನ ಹೆಚ್ಚಾಗುವುದಿಲ್ಲ. ಆದರೆ, ತೆರಿಗೆ ಕಡಿತದ ಲಾಭ ದೇಶದ ಜನರಿಗೆ ದೊರೆಯುವಂತೆ ಮಾಡಬೇಕಿದೆ ಎಂದರು.










ಕರ್ನಾಟಕ ಸರ್ಕಾರ. ಗ್ಯಾರಂಟಿ ಸರ್ಕಾರ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg
5 ಕೆಜಿ ಆಹಾರಧಾನ್ಯ ಬದಲಿಗೆ ರೂ. 170
ಹೆಚ್ಚುವರಿ 5 ಕೆ.ಜಿ ಅಕ್ಕಿ ಬದಲು 170 ರೂ. ನೀಡಿಕೆ ಪಡಿತರ ಚೀಟಿಯ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ನೇರ ನಗದು ವರ್ಗಾವಣೆ
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
3.99 ಕೋಟಿ ಫಲಾನುಭವಿಗಳಿಗೆ ರೂ.3751 ಕೋಟಿ ಹಣವನ್ನು ವರ್ಗಾಯಿಸಲಾಗಿದೆ
'ಅನ್ನ ದೇವರಿಗಿಂತ ಇನ್ನು ದೇವರು ಇಲ್ಲ" ಎಂಬುವ ಸರ್ವಜ್ಞರ ಕವಿವಾಣಿಯಂತೆ ಹಸಿವುಮುಕ್ತ ಕರ್ನಾಟಕ ರೂಪಿಸುವ ಜೀವಮಾನದ ಆಶಯ ಹೊತ್ತ ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ ನಾಯಕತ್ವದ ಅಡಿಯಲ್ಲಿ ಕರ್ನಾಟಕ ಸರ್ಕಾರವು ಅನ್ನಭಾಗ್ಯ ಯೋಜನೆ ಜಾರಿಗೆ ತಂದಿದ್ದು, ಕರ್ನಾಟಕದ ಜನತೆ ನೆಮ್ಮದಿಯ ಬದುಕು ಸಾಗಿಸಲು ಆಹಾರ ಭದ್ರತೆ ಸಾಕಾರವಾಗಿದೆ.
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶಕ್ತಿ ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಪ್ರತಿನಿತ್ಯ 62 ಲಕ್ಷ ಮಹಿಳಾ ಪ್ರಯಾಣಿಕರು. ಇದುವರೆಗೆ 136 ಕೋಟಿ ಟ್ರಿಪ್
ಗೃಹಲಕ್ಷ್ಮಿ ₹2000
1.09 ಕೋಟಿ ಖಾತೆಗಳಿಗೆ ನಗದು ವರ್ಗಾವಣೆ
ಸನ್ಮಾನ್ಯ ಮುಖ್ಯಮಂತ್ರಿ ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾನ್ಯ ಆಹಾರ ಮತ್ತು ನಾಗರಿಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರಗಳ ಸಚಿವರಾದ ಶ್ರೀ ಕೆ. ಹೆಚ್. ಮುನಿಯಪ್ಪರವರು ಅನ್ನಭಾಗ್ಯ ಯೋಜನೆಗೆ ಚಾಲನೆ ನೀಡುತ್ತಿರುವರು
1.59 ಕೋಟಿಗೂ ಅಧಿಕ ಕುಟುಂಬಗಳಿಗೆ ಉಚಿತ ವಿದ್ಯುತ್ ನೀಡಿಕೆ
ಗೃಹ ಜ್ಯೋತಿ ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
4.5 ಲಕ್ಷ ಯುವ ಜನರಿಗೆ ನೆರವಾಗುವ ನಿರೀಕ್ಷೆ
ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500
ನುಡಿದಂತೆ ನಡೆದಿದ್ದೇವೆ...
ಕರ್ನಾಟಕದಲ್ಲಿ 96% ಗೂ ಹೆಚ್ಚಿನ ಜನರು ಒಂದು ಅಥವಾ ಹೆಚ್ಚು ಗ್ಯಾರಂಟಿ ಯೋಜನೆಗಳ ಅನುಕೂಲವನ್ನು ಪಡೆಯುತ್ತಿರುವರು.
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka
https://dipr.karnataka.gov.in/
ಕರ್ನಾಟಕ ವಾರ್ತೆ
ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ / ಹಿಂದುಳಿದ ವರ್ಗಗಳ ಮಾಲೀಕತ್ವ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

# ಶೇ.60 ಕನ್ನಡ ಕಡ್ಡಾಯ ಸುಗ್ರೀವಾಜ್ಞೆ

## ರಾಜಭವನ - ಸರ್ಕಾರದ ಮುಸುಕಿನ ಗುದ್ದಾಟ

ಬೆಂಗಳೂರು, ಜ. 31 - ಅಂಗಡಿ-ಮುಂಗಟ್ಟುಗಳ ನಾಮಫಲಕಗಳಲ್ಲಿ ಶೇ. 60ರಷ್ಟು ಕನ್ನಡ ಬಳಕೆ ಕಡ್ಡಾಯವಾಗಿ ಜಾರಿಗೊಳಿಸುವ ಸುಗ್ರೀವಾಜ್ಞೆ ವಿಷಯದಲ್ಲಿ ರಾಜಭವನ ಮತ್ತು ಸರ್ಕಾರದ ನಡುವೆ ಮುಸುಕಿನ ಗುದ್ದಾಟ ನಡೆದಿದೆ.

ನಾಮಫಲಕ ಕಡ್ಡಾಯ ಸುಗ್ರೀವಾಜ್ಞೆಗೆ ರಾಜ್ಯಪಾಲರು ಸಹಿ ಮಾಡದೇ ಹಿಂತಿರುಗಿಸಿದ್ದಾರೆ. ಇದನ್ನು ಪುನರ್ ಪರಿಶೀಲಿಸುವಂತೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮನವಿ ಮಾಡಿದ್ದಾರೆ.

ನಾಡಿನ ಒಳಿತು ಮತ್ತು ಕನ್ನಡ ಭಾಷೆಗೆ ಗೌರವ ಮತ್ತು ಅದರ ಅಸ್ಮಿತೆಗಾಗಿ ರಾಜ್ಯ ಸರ್ಕಾರ ಸುಗ್ರೀವಾಜ್ಞೆ ತಂದಿದೆ, ಇಂತಹ ಸುಗ್ರೀವಾಜ್ಞೆಗೆ ರಾಜ್ಯಪಾಲರು ಸಮ್ಮತಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕನ್ನಡ ಭಾಷೆಯು ಭಾವನಾತ್ಮಕ ವಿಚಾರ. ನೀವು ಕರ್ನಾಟಕದಲ್ಲಿದ್ದೀರಿ, ನಮ್ಮ ರಾಜ್ಯಪಾಲರಾಗಿದ್ದೀರಿ. ಸರ್ಕಾರದ ಇಂತಹ ನೀತಿಯಲ್ಲಿ ತಪ್ಪು ಕಂಡುಹಿಡಿಯಬಾರದು, ನಾಗರಿಕರು, ಇತರೆ ಪಕ್ಷಗಳವರು ಈ ವಿಚಾರದಲ್ಲಿ ತಪ್ಪಿದೆ ಎಂದು ಹೇಳಿಲ್ಲ.


ಇದರಲ್ಲಿ ತಪ್ಪುಗಳಿವೆ ಎಂದು ಯಾರಾದರೂ ಆಕ್ಷೇಪ ಸಲ್ಲಿಸಿದ್ದಾರೆಯೇ, ಆದ ಕಾರಣ ಮತ್ತೊಮ್ಮೆ ಆದೇಶ ಪರಿಶೀಲಿಸುವಂತೆ ರಾಜ್ಯಪಾಲರಲ್ಲಿ ಮನವಿ ಮಾಡುತ್ತೇನೆ ಎಂದರು.

ಉಪಮುಖ್ಯಮಂತ್ರಿ ಅವರ ಮಾಧ್ಯಮ ಹೇಳಿಕೆ ಬೆನ್ನಲ್ಲೇ ಈ ಸಂಬಂಧ ರಾಜಭವನ ಸ್ಪಷ್ಟನೆ ನೀಡಿ, ಕನ್ನಡ ನಾಮಫಲಕ ಕಡ್ಡಾಯ ಸುಗ್ರೀವಾಜ್ಞೆ ತಿರಸ್ಕರಿಸಿಲ್ಲ, ಹಿಂದಿರುಗಿಸಿದ್ದೇವೆ ಎಂದಿದೆ.

ಸರ್ಕಾರ ವಿಧಾನಮಂಡಲದ ಅಧಿವೇಶನ ಕರೆದಿರುವ ಹಿನ್ನೆಲೆಯಲ್ಲಿ ಅಲ್ಲಿಯೇ ಕಾಯಿದೆ ಮಂಡಿಸಿ, ಒಪ್ಪಿಗೆ ಪಡೆದುಕೊಳ್ಳಿ ಎಂಬುದಾಗಿ ಮಾತ್ರ ಸಲಹೆ ನೀಡಿ ಹಿಂತಿರುಗಿಸಿದ್ದೇವೆ ಎಂದಿದೆ.

ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಬಳಕೆಗೆ ಹೊರಡಿಸಿದ್ದ ಸುಗ್ರೀವಾಜ್ಞೆಗೆ ಅಂಕಿತ ಹಾಕಲು ರಾಜಭವನಕ್ಕೆ ಕಳುಹಿಸಲಾಗಿತ್ತು ಎಂದರು.

ರಾಜ್ಯಪಾಲರು ಅಂಕಿತ ಹಾಕುವ ಮುನ್ನವೇ ಅಧಿವೇಶನ ಕರೆದಿರುವ ಹಿನ್ನೆಲೆಯಲ್ಲಿ ಕಡತವನ್ನು ಸರ್ಕಾರಕ್ಕೆ ಹಿಂತಿರುಗಿಸಿ, ಅಧಿವೇಶನದಲ್ಲೇ ಮಂಡಿಸಿ ಎಂದು ತಿಳಿಸಿದ್ದಾರೆ ಎಂದರು.




## ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.

### ಆಡಳಿತ ಮಂಡಳಿ ಚುನಾವಣೆ-2024

ಮಾನ್ಯ ಗೌರವಾನ್ವಿತ ಸದಸ್ಯರಲ್ಲಿ ಮನವಿ,

ದಿನಾಂಕ 11.02.2024ರ ಭಾನುವಾರದಂದು ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಎಂ.ಜೆ. ಗಿರೀಶ್ (ಮಾಗಾನಹಳ್ಳಿ) ಆದ ನಾನು ಗುರು-ಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಚುನಾವಣೆಗೆ ಸ್ಪರ್ಧಿಸುತ್ತಿದ್ದು, ಬ್ಯಾಂಕಿನ ಮತ್ತು ಬ್ಯಾಂಕಿನ ಸದಸ್ಯರಾದ ತಮ್ಮಗಳ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಈ ನನ್ನ ಸ್ಪರ್ಧೆಗೆ ಗುರು-ಹಿರಿಯರ ಆಶೀರ್ವಾದ, ಸ್ನೇಹಿತರು ಮತ್ತು ಸಜ್ಜನರ ಶುಭ ಹಾರೈಕೆ, ನಿಮ್ಮಗಳ ಆಶೀರ್ವಾದದೊಂದಿಗೆ ತಮ್ಮ ಅತೀ ಅಮೂಲ್ಯವಾದ ಮತವನ್ನು ನನಗೂ ಒಂದು ನೀಡಿ ನನ್ನನ್ನು ಪ್ರಚಂಡ ಬಹುಮತದಿಂದ ಆರಿಸಿ, ನಿಮ್ಮೆಲ್ಲರ ಸೇವೆಯನ್ನು ಮಾಡಲು ಅವಕಾಶ ಮಾಡಿಕೋಡಬೇಕಾಗಿ ಪ್ರೀತಿಯಿಂದ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.



ತಮ್ಮ ಸೇವಾಕಾಂಕ್ಷಿ
**ಎಂ.ಜೆ. ಗಿರೀಶ್**
(ಮಾಗಾನಹಳ್ಳಿ)

ದಿನಾಂಕ : 11-02-2024ನೇ ಭಾನುವಾರ ಬೆಳಗ್ಗೆ 9.00 ರಿಂದ ಸಂಜೆ 4.00 ರವರೆಗೆ
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ, ದಾವಣಗೆರೆ

## ಬಾದಾಮಿ ಜಯಣ್ಣ ನಾಮಪತ್ರ ಸಲ್ಲಿಕೆ



ಶ್ರೀ ಬಾದಾಮಿ ಜಯಣ್ಣ ಇವರು ದಿನಾಂಕ 11.02.2024ರ ಭಾನುವಾರ ನಡೆಯಲಿರುವ ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಇದರ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲು ಚುನಾವಣಾಧಿಕಾರಿಗಳಿಗೆ ಉಮೇದುವಾರಿಕೆ ಅರ್ಜಿಯನ್ನು ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಬಾದಾಮಿ ಮಹದೇವಪ್ಪ, ಸಚಿನ್ ಗೊಳಸಂಗಿ, ಸಾಹುಕಾರ್ ಬಸೆಟೆಪ್ಪ, ಮಂಜುನಾಥ್ ಪುರವಂತರ್, ಬಾದಾಮಿ ಮುರುಗೇಶ್, ಕುಮಾರ್ ಬಾದಾಮಿ, ರಂಗಣ್ಣ ಪುಟಾಣ್‌ಕರ್, ಉಮೇಶಣ್ಣ ಕೊಂಡಜ್ಜಿ, ಪ್ರಕಾಶ್ ಕುರ್ಡೇಕರ್, ನಿರಂಜನ್ ಅಣಬೂರ್‌ಮಠ್, ಮಹಾಂತೇಶ್ ಜಿ. ಆಡಿಟರ್, ಮುರುಗೇಶ್ ಉತ್ತಂಗಿ, ವಿರುಪಾಕ್ಷಿ ಜವಳಿ, ಎಲ್. ದಯಾನಂದ್, ವಕೀಲರು, ಪ್ರಸನ್ನರೆಡ್ಡಿ, ಬಾದಾಮಿ ಪ್ರಭಣ್ಣ, ಕೆ.ಎಸ್. ಜಯಣ್ಣ, ರಾಮ್ & ಕೋ ನಾಗರಾಜ್, ದಿವಾಕರ್ ವಕೀಲರು ಹಾಗೂ ಇನ್ನೂ ಮುಂತಾದ ಗಣ್ಯ ವರ್ತಕರು, ಸ್ನೇಹಿತರು, ಹಿತೈಷಿಗಳು ಜೊತೆಗೆ ಹೆಜ್ಜೆ ಹಾಕಿದರು.



# ನಗರದಲ್ಲಿ ಇಂದು ಬ್ರಹ್ಮಾಕುಮಾರಿ ಶಿವಾನಿ ಉಪನ್ಯಾಸ



ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸ್ಥಳೀಯ ಶಾಖೆ ವತಿಯಿಂದ ಫೆ.1ರ ಗುರುವಾರ ಸಂಜೆ 5.30ಕ್ಕೆ ರಾಜಯೋಗಿನಿ ಬ್ರಹ್ಮಾಕುಮಾರಿ ಶಿವಾನಿ ಅವರಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮ ಆಯೋಜಿಸಲಾಗಿದೆ.

ಬ್ರಹ್ಮಾಕುಮಾರಿ ಸಂಸ್ಥೆಯ ಸ್ಥಳೀಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಲೀಲಾಜಿ ಅವರು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.

ಎಸ್.ಎಸ್. ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಬಾಪೂಜಿ ಎಂಬಿಎ ಕಾಲೇಜು ಮೈದಾನದಲ್ಲಿ ಉಪನ್ಯಾಸ ಕಾರ್ಯಕ್ರಮ ನಡೆಯಲಿದ್ದು, 5 ಸಾವಿರಕ್ಕೂ ಹೆಚ್ಚು ಜನರು ಪಾಲ್ಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಬ್ರಹ್ಮಾಕುಮಾರೀಸ್ ಸಂಸ್ಥೆಯ ಹುಬ್ಬಳ್ಳಿ ವಲಯ ನಿರ್ದೇಶಕರಾದ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಅವರ ಸಾನ್ನಿಧ್ಯ, ಬ್ರಹ್ಮಾಕುಮಾರೀಸ್ ಸಂಸ್ಥೆಯ ಹುಬ್ಬಳ್ಳಿ ವಲಯ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜಿ ಅಧ್ಯಕ್ಷತೆಯಲ್ಲಿ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಶಾಸಕರುಗಳಾದ ಬಿ.ಪಿ. ಹರೀಶ್, ಕೆ.ಎಸ್. ಬಸವಂತಪ್ಪ, ಬಸವರಾಜ ಶಿವಗಂಗಾ, ಜಿಲ್ಲಾಧಿಕಾರಿ ಡಾ. ಎಂ.ವಿ. ವೆಂಕಟೇಶ್, ಪೂರ್ವ ವಲಯ ಪೊಲೀಸ್ ಮಹಾನಿರೀಕ್ಷಕ ಡಾ. ಕೆ. ತ್ಯಾಗರಾಜನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ನ್ಯಾಯಾಧೀಶರಾದ ರಾಜೇಶ್ವರಿ ಎನ್. ಹೆಗಡೆ, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಸುರೇಶ್ ಇಟ್ನಾಳ್, ಉಪ ವಿಭಾಗಾಧಿಕಾರಿ ಶ್ರೀಮತಿ ಎನ್. ದುರ್ಗಾಶ್ರೀ, ತಹಶೀಲ್ದಾರ್ ಡಾ. ಅಶ್ವತ್ಥ್, ಕೈಗಾರಿಕೋದ್ಯಮಿ ಅಥಣಿ ಎಸ್. ವೀರಣ್ಣ, ಮಹಾನಗರ ಪಾಲಿಕೆ ಮಹಾಪೌರರಾದ ವಿನಾಯಕ ಪೈಲ್ವಾನ್, ದಾವಣಗೆರೆ ವಿವಿ ಉಪ ಕುಲಪತಿ ಡಾ.ಬಿ.ಡಿ. ಕುಂಬಾರ, ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಗ್ರಾಸಿಂ ಇಂಡಸ್ಟ್ರೀಸ್ ಹಿರಿಯ ಅಧ್ಯಕ್ಷ ಅಜಯ್ ಗುಪ್ತ ಅವರುಗಳು ಗೌರವಾನ್ವಿತ ಅತಿಥಿಗಳಾಗಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತ ಇ.ಎಂ. ಮಂಜುನಾಥ, ದಾಂಡೇಲಿ ಸಂಚಾಲಕರಾದ ಬ್ರಹ್ಮಾಕುಮಾರಿ ಗೀತ, ಶಾಮನೂರು ಸುರೇಶ್, ಕಾಶಪ್ಪ ಉಪಸ್ಥಿತರಿದ್ದರು.

**ಶಿವಾನಿ ಅವರ ಪರಿಚಯ :** ಮೂಲತಃ ದೆಹಲಿಯವರಾದ ಶಿವಾನಿ ಅವರು, ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವೀಧರರಾಗಿದ್ದು, ಪೂನಾದ ಭಾರತೀಯ ವಿದ್ಯಾಪೀಠದಲ್ಲಿ ಎರಡು ವರ್ಷ ಉಪನ್ಯಾಸಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಬ್ರಹ್ಮಾಕುಮಾರೀಸ್ ಸಂಸ್ಥೆಯಲ್ಲಿ ಅನೇಕ ವರ್ಷಗಳಿಂದ ರಾಜಯೋಗದ ಅಧ್ಯಯನ ಮಾಡುತ್ತಿರುವ ಅವರೀಗ ರಾಜಯೋಗ ಶಿಕ್ಷಕರಾಗಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಉಪನ್ಯಾಸ ನೀಡುತ್ತಿದ್ದಾರೆ.

ಅಧ್ಯಾತ್ಮಿಕ ಮತ್ತು ನೈತಿಕ ಶಿಕ್ಷಣ ಕುರಿತಂತೆ ಕಳೆದ 16 ವರ್ಷಗಳಿಂದ ಭಾರತ ಮತ್ತು ವಿದೇಶಗಳಲ್ಲಿ ಹಲವಾರು ಸಭಾ ಕಾರ್ಯಕ್ರಮ ಮತ್ತು ದೂರದರ್ಶನಗಳಲ್ಲಿ ಉಪನ್ಯಾಸ ನೀಡುತ್ತಿದ್ದಾರೆ. ಅವೇಕ್‌ನಿಂಗ್, ಪೀಸ್ ಆಫ್ ಮೈಂಡ್, ಆಸ್ತಾ ಟಿವಿ, ಝೀ ಟಿವಿ ಸೇರಿದಂತೆ, ಇತರೆ ಟಿವಿಗಳಲ್ಲೂ ಶಿವಾನಿ ಅವರ ಉಪನ್ಯಾಸ ಕಾರ್ಯಕ್ರಮಗಳು ಪ್ರಸಾರವಾಗುತ್ತಲೇ ಇವೆ.

ಒತ್ತಡದಲ್ಲಿರುವ ಅನೇಕರಿಗೆ ಸನ್ಮಾರ್ಗ ತೋರುವಂತಹ ವಿಶೇಷ ಉಪನ್ಯಾಸದ ಸೇವೆಯನ್ನು ಶಿವಾನಿ ಅವರು ಮಾಡುತ್ತಿದ್ದಾರೆ. ಅಮೆರಿಕ, ಆಫ್ರಿಕಾ, ಅರಬ್ ಮತ್ತು ಇತರೆ ರಾಷ್ಟ್ರಗಳಿಗೂ ಹೋಗಿ ತಮ್ಮ ಮಹೋನ್ನತ ಸೇವೆ ಸಲ್ಲಿಸುತ್ತಿದ್ದಾರೆ.

ಒತ್ತಡ ಮುಕ್ತ ಜೀವನ ಶೈಲಿ, ನಾಯಕತ್ವ ಕೌಶಲ್ಯಗಳು, ಭಾವನಾತ್ಮಕ ಬುದ್ದಿವಂತಿಕೆ, ಸಕಾರಾತ್ಮಕ ಚಿಂತನಾ ಕಲೆ, ಜೀವನ ಮತ್ತು ಜೀವಂತ ಮೌಲ್ಯಗಳು, ಆಂತರಿಕ ಶಕ್ತಿಗಳನ್ನು ಗುರುತಿಸುವುದು, ಸ್ವ-ನಿರ್ವಹಣೆ, ಸಂಬಂಧಗಳಲ್ಲಿ ಸಾಮರಸ್ಯ, ರಾಜಯೋಗದ ಪ್ರಾಯೋಗಿಕ ವಿಧಾನಗಳು ಇತ್ಯಾದಿ ವಿಷಯಗಳನ್ನು ತುಂಬಾ ಸರಳವಾಗಿ ಜನಮನಕ್ಕೆ ತಲುಪುವಂತೆ ಮತ್ತು ಸಕಾರಾತ್ಮಕ ಬದಲಾವಣೆ ತರುವಲ್ಲಿ ಮನವರಿಕೆ ಮಾಡಿಕೊಡುತ್ತಿದ್ದಾರೆ.

# ನಗರದಲ್ಲಿ ಇಂದು ಶ್ರೀ ಹಾಲು ಚೌಡಮ್ಮ ದೇವಿ ನೂತನ ವಿಗ್ರಹ ಪ್ರತಿಷ್ಠಾಪನೆ ಮಹೋತ್ಸವ

ವಕ್ಕಲಿಗರ ಪೇಟೆಯ ವಿಜಯಲಕ್ಷ್ಮಿ ರಸ್ತೆಯಲ್ಲಿ ಶ್ರೀ ಹಾಲು ಚೌಡಮ್ಮ ದೇವಿ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಶ್ರೀ ಹಾಲು ಚೌಡಮ್ಮ ದೇವಿಯ ನೂತನ ವಿಗ್ರಹ ಪ್ರತಿಷ್ಠಾಪನೆ ಮಹೋತ್ಸವವು ಇಂದು ಮತ್ತು ನಾಳೆ ಶ್ರೀ ಮದುಜ್ಜಯಿನಿ ಜಗದ್ಗುರುಗಳ ಮತ್ತು ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 8 ಗಂಟೆಯಿಂದ ವಿವಿಧ ಪೂಜಾ ಕಾರ್ಯಕ್ರಮಗಳು, ಮಧ್ಯಾಹ್ನ 3.05 ಗಂಟೆಯಿಂದ ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಸ್ಥಾನದಿಂದ ಅದ್ದೂರಿ ಮೆರವಣಿಗೆ ಮೂಲಕ ದೇವರ ಮೂರ್ತಿಗಳನ್ನು ತರಲಾಗುವುದು.




## ವೀರಮಾಹೇಶ್ವರ ಸೊಸೈಟಿಯ ನಿರ್ದೇಶಕರ ಅನರ್ಹತೆಗೆ ತಡೆಯಾಜ್ಞೆ

ದಾವಣಗೆರೆ,ಜ.31- ಶ್ರೀ ವೀರಮಾಹೇಶ್ವರ ಕ್ರೆಡಿಟ್ ಕೋ-ಆಪ್. ಸೊಸೈಟಿಯ ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರನ್ನು ಅನರ್ಹಗೊಳಿಸಿ ಹೊರಡಿಸಿದ್ದ ದಾವಣಗೆರೆ ಉಪನಿಬಂಧಕರ ನ್ಯಾಯಾಲಯದ ಆದೇಶಕ್ಕೆ ಬೆಂಗಳೂರು ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿಬಂಧಕರು ತಡೆಯಾಜ್ಞೆ ನೀಡಿದ್ದಾರೆ.


ಸಂಘದಲ್ಲಿ ರಾಜೀನಾಮೆಯಿಂದ ತೆರವಾದ ಮೂವರು ನಿರ್ದೇಶಕರ ಸ್ಥಾನಗಳನ್ನು ಕಾನೂನು ಬಾಹಿರವಾಗಿ ಸೇರ್ಪಡೆ ಮಾಡಿಕೊಂಡಿರುವುದು ಮತ್ತು 7 ಸ್ಥಾನಗಳನ್ನು ಚುನಾವಣೆ ಮೂಲಕ ಕ್ರಮವಿಟ್ಟಿರುವುದಿಲ್ಲ ಎಂಬ ಅರ್ಜಿದಾರರ ವಾದದ ಹಿನ್ನೆಲೆಯಲ್ಲಿ ವಿಚಾರಣೆ ನಡೆಸಿದ್ದ ದಾವಣಗೆರೆ ಉಪನಿಬಂಧಕರ ನ್ಯಾಯಾಲಯವು ಸಂಘದ ಎಲ್ಲಾ ನಿರ್ದೇಶಕರನ್ನು ಅನರ್ಹಗೊಳಿಸಿ ಸಂಘಕ್ಕೆ ವಿಶೇಷ ಅಧಿಕಾರಿಯನ್ನು ನೇಮಕಗೊಳಿಸಿ ಆದೇಶ ನೀಡಿತ್ತು.

ಈ ಆದೇಶವನ್ನು ಪ್ರಶ್ನಿಸಿ ಸಂಘದ ಪರ ವಕೀಲರು ಸಲ್ಲಿಸಿದ್ದ ಮೇಲ್ಮನವಿಯನ್ನು ಪುರಸ್ಕರಿಸಿದ ಬೆಂಗಳೂರು ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿಬಂಧಕರು ತಡೆಯಾಜ್ಞೆ ನೀಡಿ ಮಧ್ಯಂತರ ಆದೇಶ ಹೊರಡಿಸಿದ್ದಾರೆ ಎಂದು ಸಂಘದ ಪ್ರಕಟಣೆ ತಿಳಿಸಿದೆ.

ಸಂಘವು ನೂತನ ಕಟ್ಟಡವನ್ನು ನಿರ್ಮಾಣ ಮಾಡುತ್ತಿರುವುದಲ್ಲದೇ, ಉತ್ತಮವಾಗಿ ಸೇವೆ ಸಲ್ಲಿಸುತ್ತಿದ್ದರೂ ಕೆಲವು ಸದಸ್ಯರು ಷೇರುದಾರರನ್ನು ದಾರಿ ತಪ್ಪಿಸುವ ನಿಟ್ಟಿನಲ್ಲಿ ವರ್ತಿಸುತ್ತಿದ್ದು, ಈ ಬಗ್ಗೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವುದಾಗಿ ಸಂಘದ ಅಧ್ಯಕ್ಷ ತ್ಯಾವಣಿಗಿ ವೀರಭದ್ರಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಬಜೆಟ್ ಚರ್ಚೆ

ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯ, ಬಾಪೂಜಿ ಅಕಾಡೆಮಿ ಆಫ್ ಮ್ಯಾನೇಜ್‌ಮೆಂಟ್ ಅಂಡ್ ರಿಸರ್ಚ್ ವತಿಯಿಂದ ಇಂದು ಬೆಳಿಗ್ಗೆ 11 ಗಂಟೆಗೆ ಬಾಪೂಜಿ ಎಂ.ಬಿ.ಎ. ಕಾಲೇಜಿನಲ್ಲಿ 'ಬಜೆಟ್-2024' ಚರ್ಚಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬಾಪೂಜಿ ಬಿ.ಸ್ಕೂಲ್ ಅಧ್ಯಕ್ಷ ಅಥಣಿ ಎಸ್. ವೀರಣ್ಣ ಅಧ್ಯಕ್ಷತೆ ವಹಿಸಲಿದ್ದು, ದಾವಣಗೆರೆ ವಿವಿ ಅರ್ಥಶಾಸ್ತ್ರ ಪ್ರಾಧ್ಯಾಪಕ ಡಾ.ಕೆ.ಬಿ. ರಂಗಪ್ಪ, ಮಂಗಳೂರಿನ ಕೆನರಾ ಇನ್‌ಸ್ಟಿಟ್ಯೂಟ್ ಆಫ್ ಬ್ಯಾಂಕಿಂಗ್ ಮ್ಯಾನೇಜ್‌ಮೆಂಟ್‌ನ ಅಶೋಕ್ ವಿ. ಜೋಷಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಲಿದ್ದಾರೆ.







## ನಾಳೆ ಸುಲ್ತಾನ್‌ನ ವಿಶ್ವ ವಜ್ರ ಪ್ರದರ್ಶನ

ದಾವಣಗೆರೆ, ಜ. 31 – ನಗರದ ಸುಲ್ತಾನ್ ಡೈಮಂಡ್ಸ್ ಅಂಡ್ ಗೋಲ್ಡ್ ಶೋ ರೂಂ ವತಿಯಿಂದ ಫೆ.2ರಿಂದ 11ರವರೆಗೆ 'ವಿಶ್ವ ವಜ್ರ' ವಜ್ರದ ಆಭರಣಗಳ ಪ್ರದರ್ಶನ ಹಾಗೂ ಮಾರಾಟ ನಡೆಯಲಿದೆ.

ಸುಲ್ತಾನ್ ಶೋರೂಂನಲ್ಲಿ ಆಯೋಜಿಸಲಾಗಿರುವ ಈ ಪ್ರದರ್ಶನದ ಉದ್ಘಾಟನೆಯನ್ನು ನಟಿ ಮೇಘಾ ಶೆಟ್ಟಿ ಅವರು ಫೆಬ್ರವರಿ 2ರ ಶುಕ್ರವಾರ ಸಂಜೆ 5 ಗಂಟೆಗೆ ನೆರವೇರಿಸಲಿದ್ದಾರೆ.

ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಅಕ್ಷರ ಸೀಡ್ಸ್ ಅಂಡ್ ಸರ್ವೀಸಸ್ ವ್ಯವಸ್ಥಾಪಕ ನಿರ್ದೇಶಕ ಎನ್. ಕೊಟ್ರೇಶ್, ಆರ್.ಜಿ. ಸಾಫ್ಟ್‌ವೇರ್ ಸೊಲ್ಯೂಷನ್ಸ್ ಸಿಇಒ ಎಂ.ಡಿ. ಸುಹೇಲ್, ಹರಿಹರದ ಶ್ರೇಯ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ವೈ. ರಶ್ಮಿ, ಎ.ಆರ್. ಟಿಂಬರ್ ಅಂಡ್ ಫರ್ನೀಚರ್‌ನ ಲಿಯಾಖತ್ ಅಲಿ, ಶ್ರಮಜೀವಿ ಇಂಡಸ್ಟ್ರೀಸ್‌ನ ಶಶಿಕಲಾ ಹಾಗೂ ಸೌಮ್ಯ, ಉದ್ಯಮಿ ಮಂಜುಳ, ಎಸ್.ಎ.ಎನ್. ಆಗ್ರೋ ಸ್ಪೈಸಸ್ ವ್ಯವಸ್ಥಾಪಕ ನಿರ್ದೇಶಕ ಶಫಿ ಹಾಗೂ ಬಶೀರ್ ಟ್ರೇಡರ್ಸ್ ಸ್ಕ್ರಾಪ್ ಮರ್ಚೆಂಟ್ ನಯಾಜ್ ಉಪಸ್ಥಿತರಿರಲಿದ್ದಾರೆ.

ಲಕ್ಷುರಿ ಡೈಮಂಡ್, ಸಾಲಿಟೇರ್ ಕಲೆಕ್ಷನ್, ಟ್ರಡಿಷನಲ್ ಕ್ಲೋಸ್ ಸೆಟ್ಟಿಂಗ್ ಡೈಮಂಡ್, ತಾನ್ಮೇನಿಯ ಕಲೆಕ್ಷನ್ ಸೇರಿದಂತೆ ಹಲವು ರೀತಿಯ ಆಭರಣಗಳು ಪ್ರದರ್ಶನವಾಗಲಿವೆ.

ಫೆಬ್ರವರಿ 11ರವರೆಗೆ ನಡೆಯಲಿರುವ ಈ ಪ್ರದರ್ಶನದಲ್ಲಿ ಗ್ರಾಹಕರಿಗೆ ಪ್ರತಿ ಡೈಮಂಡ್ ಕ್ಯಾರೆಟ್‌ಗೆ 8 ಸಾವಿರ ರೂ.ಗಳವರೆಗಿನ ವಿನಾಯಿತಿಯೂ ಲಭ್ಯವಿದೆ ಎಂದು ಸುಲ್ತಾನ್ ಡೈಮಂಡ್ಸ್ ಅಂಡ್ ಗೋಲ್ಡ್ ಪ್ರಕಟಣೆಯಲ್ಲಿ ತಿಳಿಸಲಾಗಿದೆ.







## ಪಾಕ್ ಮಾಜಿ ಪ್ರಧಾನಿಗೆ ಜೈಲು

ಇಸ್ಲಾಮಾಬಾದ್, ಜ. 31 - ಭ್ರಷ್ಟಾಚಾರ ಪ್ರಕರಣದಲ್ಲಿ ಪಾಕಿಸ್ತಾನದ ಮಾಜಿ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಹಾಗೂ ಅವರ ಪತ್ನಿ ಬುಶ್ರಾ ಬೀಬಿ ಅವರಿಗೆ ಪಾಕಿಸ್ತಾನದ ನ್ಯಾಯಾಲಯ 14 ವರ್ಷದ ಜೈಲು ಶಿಕ್ಷೆ ವಿಧಿಸಿದೆ. ಸರ್ಕಾರದ ಸೂಕ್ಷ್ಮ ಮಾಹಿತಿ ಸೋರಿಕೆ ಮಾಡಿದ ಆರೋಪದ ಮೇಲೆ ನಿನ್ನೆಯಷ್ಟೇ ಅವರಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗಿತ್ತು.


ಫೆಬ್ರವರಿ 8ರಂದು ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ವಿಧಿಸಲಾಗಿರುವ ಶಿಕ್ಷೆಗಳು ಇಮ್ರಾನ್ ಖಾನ್‌ಗೆ ಸಮಸ್ಯೆ ತಂದಿವೆ. ಇದಕ್ಕೂ ಮುಂಚೆ ಇನ್ನೊಂದು ಭ್ರಷ್ಟಾಚಾರ ಪ್ರಕರಣದಲ್ಲಿ ಇಮ್ರಾನ್ ಖಾನ್‌ಗೆ ಮೂರು ವರ್ಷಗಳ ಶಿಕ್ಷೆಯಾಗಿದೆ.

ಖಾನ್ ಅವರ ಪಿ.ಟಿ.ಐ. ಪಕ್ಷದ ಚುನಾವಣಾ ಚಿಹ್ನೆಯನ್ನು ಮೊದಲು ನಿರಾಕರಿಸಲಾಗಿತ್ತು. ಖಾನ್, ಮಾಜಿ ವಿದೇಶಾಂಗ ಸಚಿವ ಷಾ ಮೆಹಮೂದ್ ಖುರೇಶಿ ಹಾಗೂ ಪಕ್ಷದ ಹಲವು ನಾಯಕರ ನಾಮಪತ್ರಗಳನ್ನು ತಿರಸ್ಕರಿಸಲಾಗಿತ್ತು.











ಜನ್ಮದಿನದ ಶುಭಾಶಯಗಳು
76th
ದಾವಣಗೆರೆ ಹೋಟೆಲ್ ಪೂಜಾ ಇಂಟರ್ ನ್ಯಾಷನಲ್ ಪಾಲುದಾರರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್, ಹರಿಹರ ನಗರಸಭೆ ಮಾಜಿ ಅಧ್ಯಕ್ಷರು ಹಾಗೂ ಗಣ್ಯ ಉದ್ಯಮಿಗಳೂ ಆದ
ಶ್ರೀ ಕೃಷ್ಣಾಸಾ ಭೂತೆ
ಇವರು 75ನೇ ಹುಟ್ಟು ಹಬ್ಬದ ಸಂಭ್ರಮದಲ್ಲಿರುವ ಈ ಶುಭ ಸಂದರ್ಭದಲ್ಲಿ ಪರಮಾತ್ಮನು ಇನ್ನೂ ಹೆಚ್ಚಿನ ಆಯುರಾರೋಗ್ಯ, ಐಶ್ವರ್ಯ ನೀಡಿ, ಅವರಿಗೆ ಇನ್ನೂ ಹೆಚ್ಚಿನ ಸಮಾಜ ಸೇವೆ ಮಾಡುವ ಚೈತನ್ಯವನ್ನು ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.
ಪಾಲುದಾರರು ಹಾಗೂ ಸಿಬ್ಬಂದಿ ವರ್ಗ
ಹೋಟೆಲ್ ಪೂಜಾ ಇಂಟರ್‌ನ್ಯಾಷನಲ್, ಪಿಬಿ ರೋಡ್, ದಾವಣಗೆರೆ.
ಎಂ. ಬಸಪ್ಪ
ಶ್ರೀಮತಿ ಸೇವಂತಿ ಕೆ.ಭೂತೆ
ರಾಜೇಂದ್ರ ಕೆ. ಭೂತೆ
ಶ್ರೀಮತಿ ಶಮ ಐ.ಎಸ್.
ರೇಷ್ಮ ಉಮಾಕಾಂತ್ ಕಾಟ್ವೆ
ಜಗನ್ನಾಥ್ ರಾವ್ ಬೊಂಗಾಳೆ
ವಿರೂಪಾಕ್ಷಪ್ಪ ವೈ.
ಎಸ್.ಎಲ್. ಆನಂದಪ್ಪ
ಕಾಳಪ್ಪ ಬೊಂಗಾಳೆ
ರಾಘವೇಂದ್ರ ಬೊಂಗಾಳೆ
ರಾಘವೇಂದ್ರ ಎಂ.ಬಿ.
ಜ್ಞಾನೇಶ್ವರ ಬೊಂಗಾಳೆ
ಮಲ್ಲಪ್ಪ ಬಿ.
ಮೆಹಬೂಬ್ ಎಂ.ಜಿ.
ಬಸವರಾಜ್ ಎಂ.
ವಿನಾಯಕ ಹಂಸಾಗರ್
ಬಸವರಾಜ್ ಕೆ.ಪಿ.




ಜನ್ಮದಿನದ
ಶುಭಾಶಯಗಳು
ನಮ್ಮ ನೆಚ್ಚಿನ ಯುವ ನಾಯಕ ಹಾಗೂ ಆತ್ಮೀಯ ಸ್ನೇಹಿತರಾದ
ಶ್ರೀ ಶ್ರೀನಿವಾಸ್ ಟಿ. ದಾಸಕರಿಯಪ್ಪ
ಅವರಿಗೆ ಜನ್ಮದಿನದ ಶುಭಾಶಯಗಳು.
ಶುಭ ಕೋರುವವರು
ವಿನಾಯಕ ಪ್ರಾವಿಸನ್ ಸ್ಟೋರ್ಸ್
ಕೆ.ಆರ್. ಮಾರುಕಟ್ಟೆ, ದಾವಣಗೆರೆ.
ವಿನಾಯಕ ಟ್ರೇಡರ್ಸ್
ಕೆ.ಆರ್. ಮಾರುಕಟ್ಟೆ, ದಾವಣಗೆರೆ.
ಶಿವ ಆಟೋಮೊಬೈಲ್ಸ್
ಕೆಇಬಿ ಕಚೇರಿ ಎದುರು, ಹದಡಿ ರಸ್ತೆ, ದಾವಣಗೆರೆ.
ಆದರ್ಶ್ ಇಂಟರ್ನ್ಯಾಷನಲ್
ಅಗರಬತ್ತಿ ಕೈಗಾರಿಕೆಗಳು, ಕರೂರು, ಕೈಗಾರಿಕಾ ಪ್ರದೇಶ, ದಾವಣಗೆರೆ.




ಹುಟ್ಟುಹಬ್ಬದ ಶುಭಾಶಯಗಳು
ದಾವಣಗೆರೆ ಜಿಲ್ಲೆಯ ಸ್ನೇಹಜೀವಿ, ಬಡವರ ಬಂಧು, ಸದಾ ನೊಂದವರ ಧ್ವನಿಯಾಗಿರುವ, ನಮ್ಮ ನಿಮ್ಮೆಲ್ಲರ ನೆಚ್ಚಿನ ಜನ ನಾಯಕರಾದ
ಶ್ರೀ ಶ್ರೀನಿವಾಸ ದಾಸಕರಿಯಪ್ಪ
ಅವರಿಗೆ ಜನ್ಮ ದಿನದ ಹಾರ್ದಿಕ ಪ್ರೀತಿಯ ಶುಭಾಶಯಗಳು.
ಶುಭಾಶಯ ಕೋರುವವರು: ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕ, ದಾವಣಗೆರೆ